ಮೇಲೆ ಕೋರ್ಟ್ ಕೇಸ್ ಹಾಕಿದರೆ ಎಷ್ಟು ಜನಕ್ಕೆ ಕೋರ್ಟಲ್ಲಿ ಶಿಕ್ಷೆ ಆಗುತ್ತೆ, ಅದು ಕನವಿಕ್ಷನ್ ರೇಟ್'.

'ಮಾಯಣ್ಣ, ನೀವು ಮತ್ತೆ ಮುಂದೆ ನನ್ನ ಆಫೀಸ್‌ಗೆ ಬನ್ನಿ'.

ಪಕ್ಕದಲ್ಲಿದ್ದ ಎಸ್.ಪಿ. ಸಾಹೇಬರ ಕಡೆ ತಿರುಗಿ, 'ನೀವು ಈ ಜೂನಿಯರ್ ಆಫೀಸರ್ಸ್‌ಗಳಿಗೆ ಎಜುಕೇಟ್ ಮಾಡಬೇಕು. ಯು ಶುಡ್ ಮೇಕ್ ದೆಮ್ ಶಾರ್ಪ್ ಅಂಡ್ ಸೆರೆಬ್ರಲ್. ಇಲ್ಲಾ ಆದರೆ ಬರೀ ಬುಲ್ ವರ್ಕ್ ಮಾಡ್ತಾರೆ. ಕಲಿಯೋದು ಆಸಕ್ತಿ ಮಾಡಲ್ಲ. ಐ ನೊ ದೆಮ್ ವೆಲ್'.

'ಯೆಸ್ ಸಾರ್...'

ಎಸ್.ಪಿ. ಸಾಹೇಬರು ವಿಧೇಯತೆಯಿಂದ ತಲೆಯಾಡಿಸಿದ್ದರು.

ಮಾಯಣ್ಣನ ಕಡೆ ತಿರುಗಿ, 'ಎನ್‌ಸಿಆರ್‌ಬಿ ಸ್ಟಾಟಿಸ್ಟಿಕ್ಸ್ ನೋಡಿದ್ದೀರ? ಹೋಗಲಿ, ಎನ್‌ಸಿಆರ್‌ಬಿ ಅಂದರೆ ಗೊತ್ತ?'

'...'

'ಜನ ಹೇಗೆ ನಮ್ಮನ್ನು ಟ್ರಸ್ಟ್ ಮಾಡ್ತಾರೆ, ಕೋರ್ಟ್ ಕನ್‌ವಿಕ್ಷನ್ ರೇಟ್ ಬರೀ 59 ಪರ್ಸೆಂಟ್'.

'ಸರ್, ಅದು 2020ನೇ ವರ್ಷದ ಫಿಗರ್'.

ಎಡಿಜಿಪಿ ಸಾಹೇಬರು ಮತ್ತೊಮ್ಮೆ ತಮ್ಮ ಲ್ಯಾಪ್‌ಟಾಪ್ ನೋಡಿ, 'ಓಕೆ... ಅದು 57 ಪರ್ಸೆಂಟ್ ಇದೆ, 2021 ಇಯರ್‌ಗೆ'.

'ಸರ್, ಅದು ನ್ಯಾಷನಲ್ ಫಿಗರ್... ನಮ್ಮ ಕರ್ನಾಟಕ ರಾಜ್ಯದ್ದು 51 ಪರ್ಸೆಂಟ್ ಇದೆ ಸರ್'.

ಐಪಿಎಸ್ ಆಫೀಸರ್ ತ್ರಿವೇದಿ ಸಾಹೇಬರು ಪೆಚ್ಚು ಪೆಚ್ಚಾಗಿ ಮಾಯಣ್ಣನತ್ತ ನೋಡುತ್ತಾ, 'ಅಂದರೆ ಇನ್ನೂ ಕಡಿಮೆ ಇದೆ. ನಾನು ಅದೇ ಹೇಳಿದ್ದು'.

'ಆದರೆ ನನ್ನ ಇಂಡಿವಿಜುವಲ್ ಸ್ಕೋರ್ 100 ಪರ್ಸೆಂಟ್ ಇದೆ ಸರ್. ಸೊ ಫಾರ್ ಐ ಹ್ಯಾವ್ ಚಾರ್ಜ್ ಶೀಟೆಡ್ ಸಿಕ್ಸ್ ಮರ್ಡರ್ ಕೇಸಸ್ ಅಂಡ್ ಗಾಟ್ ಕನವಿಕ್ಷನ್ ಫ್ರಂ ಕೋರ್ಟ್ ಫಾರ್ ಆಲ್ ದಿ ಸಿಕ್ಸ್ ಕೇಸಸ್ ಸರ್'.

'ಓಕೆ, ಈ ಮರ್ಡರ್ ಕೇಸ್ ನೋಡೋಣ. ನೀವು ಏನು ಮಾಡ್ತೀರ ಅಂತ'.

ಗುಣವನ್ನು ಗುರುತಿಸುವ, ಗೌರವಿಸುವ ಘನತೆಯಾಗಲಿ ಔದಾರ್ಯವಾಗಲಿ ಇರಲಿಲ್ಲ ಇಬ್ಬರೂ ಹಿರಿಯ ಸಾಹೇಬರಿಗೆ. ಇಬ್ಬರೂ ಸಾಹೇಬರು ನಿರ್ಗಮಿಸಿದ ನಂತರ,

'ಭುಜಂಗ ಬನ್ನಿ ಇಲ್ಲಿ'.

'ಯೆಸ್ ಸಾರ್'.

'ನೀವು, ಆ ಸಿದ್ಧರಾಜು ಮತ್ತು ಜವರಯ್ಯ ಎಲ್ಲಾ ಅಮ್ಮು ಮನೆ ಹಿಂಭಾಗದ ಅಂಡರ್ ಕನ್‌ಸ್ಟ್ರಕ್ಷನ್ ಬಿಲ್ಡಿಂಗ್ ಇದೆಯಲ್ಲ, ಅಲ್ಲಿ ಹೋಗಿ ನೋಡಿ. ನಿನ್ನೆ ರಾತ್ರಿ ನನ್ನನ್ನ ಹಿಂದಿನಿಂದ ಮೆಟ್ಟಿಲ ಮೇಲಿಂದ ಕೆಳಗೆ ತಳ್ಳಿದ್ದು ಯಾರಿರಬಹುದು, ಹೇಗೆ... ಏನಾದರೂ ಸುಳಿವು ಸಿಗಬಹುದಾ ಅಂತ. ಅದರಲ್ಲೂ ಏನಾದರೂ ಹೆಜ್ಜೆಗುರುತುಗಳು ಬಿದ್ದಿದೆಯಾ ಗಮನಿಸಿ ಬಂದು ರಿಪೋರ್ಟ್ ಮಾಡಿ'.

'ಯೆಸ್ ಸಾರ್'.

ಸೀನಿಯರ್ ಸಾಹೇಬರಿಬ್ಬರೂ ಠಾಣೆಯಿಂದ ಮಧ್ಯಾಹ್ನ ಹೊರಟ ನಂತರ ಮಾಯಣ್ಣ ಸಂಜೆಯ ತನಕ ಯಾರ ಸಂಪರ್ಕಕ್ಕೂ ಸಿಗದೆ ಎಡಬಿಡದೆ, ಫೋನ್ ಕರೆಗಳನ್ನು ಮಾಡುತ್ತಾ, ತನಿಖೆಗೆ ಸಂಬಂಧಿಸಿದ ಹತ್ತು ಹಲವಾರು ಕಾರ್ಯಗಳಲ್ಲಿ ಮುಳುಗಿಹೋಗಿದ್ದ. ಹರಿದು ಬರುತ್ತಿದ್ದ ಹೊಸ ಹೊಸ ಮಾಹಿತಿಗಳ ಮತ್ತು ವಿವರಗಳ ದೆಸೆಯಿಂದ, ಏಕಕಾಲದಲ್ಲಿ ತನಿಖೆ ನಾನಾ ದಿಕ್ಕುಗಳಲ್ಲಿ ಚಲಿಸುತ್ತಾ ಉತ್ಕರ್ಷ ಪಡೆದುಕೊಂಡಿತ್ತು. ಈ ಕೊಲೆ ತನಿಖೆಗೆ ಸಂಬಂಧಿಸಿದಂತೆ ಕಲೆಹಾಕಿದ್ದ ರಾಶಿಗಟ್ಟಲೆ ಸಾಕ್ಷಿ–ಪುರಾವೆ, ಕಾಗದಪತ್ರ, ಫೋಟೊಗಳನ್ನು ಸರಿಯಾಗಿ ವಿಂಗಡಿಸುತ್ತಾ ವಿಶ್ಲೇಷಣೆಗಿಳಿದಿದ್ದ ಮಾಯಣ್ಣ. ಆಗಾಗ ವಿನಯ್ ಮತ್ತು ಕುಮಾರ್ ಮಾತ್ರ ಮುಚ್ಚಿದ ಮಾಯಣ್ಣನ ಕೋಣೆಗೆ ಹೋಗಿ ಬಂದು ಮಾಡುತ್ತಿದ್ದರು. ಅಪರಾಧ ವಿಧಿವಿಧಾನ ಪ್ರಯೋಗಾಲಯದ ರಿಪೋರ್ಟುಗಳು ಶೀಘ್ರವಾಗಿ ಬರದೆ ಸಾಕಷ್ಟು ತೊಡಕಾಗಿತ್ತು. ಇಷ್ಟೆಲ್ಲಾ ಮುಗಿಸಿ ಸಂಜೆ ಕಾಫಿಯ ಗ್ಲಾಸ್ ಹಿಡಿದು ಸ್ಟೇಷನ್ನಿನ ತಾರಸಿಗೆ ಬರುತ್ತಿದ್ದಂತೆ ಸೌಜನ್ಯಳ ಫೋನ್ ಕರೆಯುತ್ತಿತ್ತು.

'ರೀ...'

'ಹೇಳಿ ಸೌಜನ್ಯ ಮೇಡಮ್, ಇವತ್ತು ಯಾರ ಮೇಲೆ ನಿಮ್ಮ ದೂರು?'

'ನಿಮ್ ಪುಂಗಿ ಅಂಗಿರ್ಲಿ... ಕಾಟಯ್ಯನ ಮೊಬೈಲ್ ಸ್ಟೇಟಸ್ ನೋಡುದ್ರಾ?'

'ಸಾರಿ, ನಾನು ಅದು ಇದು ಮಾಡ್ಕೊಂಡು ಅದನ್ನೇ ಮರೆತುಬಿಟ್ಟೆ'.

'ಅದೇನ್ ನಿಮ್ದು ಪೊಲೀಸ್ ಸ್ಟೇಷನ್ನೊ ಇಲ್ಲ ಪಾರ್ಟಿ ಹಾಲೋ?'

'ಯಾಕ್ ಮೇಡಮ್ ನಿಮಗೆ ಈ ಅನುಮಾನ?'

'ಬರ್ತಡೇ ಪಾರ್ಟಿ ಜೋರಾಗೇ ನಡೆದೈತೆ'.

'ಹೂಂ... ತಿಳೀತು ಬಿಡಿ... ಹೊಸದಾಗಿ ಇಬ್ಬರು ಲೇಡಿ ಪೀಸಿಗಳು ಬಂದಿದ್ದಾರಲ್ಲ, ರೂಪಕಲಾ ಮತ್ತೆ ಪ್ರೇಮಕಲಾ, ಅದರಲ್ಲಿ ನಿನ್ನೆ ರೂಪಾದು ಬರ್ತಡೆ... ಸ್ಟೇಷನ್ನಲ್ಲೇ ಕೇಕ್ ತರಸಿದ್ವಿ...'

'ಅದೇನು ರೂಪ... ಅವಳೇನು ನಿಮ್ ಮಾವನ್ ಮಗ್ಳಾ... ರೂಪಕಲಾ ಅಂತ ಪೂರ್ತಿ ಯೇಳಿ... ನೋಡ್ದೆ, ಬರ್ತಡೇ ಪಾರ್ಟಿ ವಿಡಿಯೊ. ಏನು ಆ ಕಡೆ ಒಂದ್ ಕಲಾ, ಈ ಕಡೆ ಒಂದ್ ಕಲಾ, ಮಧ್ಯೆ ಮಾಯಣ್ಣೋರು ಕಿಲಕಿಲ ಲಕಲಕ. ಏನು ಆ ಬಿನ್ನಾಣ್‌ಗಿತ್ತಿ ಬಾಯ್ಗೆ ಕೇಕಿಕ್ತಾಳೆ ಅಂತ, ಮೊಸಳೆ ತರ ಬಾಯ್ ತೆಗ್ದಿದ್ದೀರ...'

'ಪಾಪ ಕಣೆ ಅಪ್ಪ ಇಲ್ಲ ಆ ಹುಡುಗಿಗೆ'.

'ಅಪ್ಪ ಇಲ್ದೋರ್ಗೆ ಅಪ್ಪ ಆಗೋದು, ಗಂಡ ಇಲ್ದೋರ್ಗೆ ಗಂಡ ಆಗೋದು, ಇವೆಲ್ಲಾ ಸೋಸ್ಯಲ್ ಸರ್ವೀಸ್ ಬೇಡ, ಸ್ಟೇಷನ್ನಾಗೆ ಎಸ್ಪೆ, ಮನ್ಯಾಗೆ ಗಂಡ ಆಗಿದ್ರೆ ಸಾಕು. ಇಲ್ಲಾಂದ್ರೆ ಡೌರಿ ಕೇಸಾಕಿ, ನಿಮ್ಮನ್ನ, ನಿಮ್ ಸ್ಟೇಷನ್ನಾಗೇ ರುಬ್ಬುಸ್ಬಿಡ್ತೀನಿ. ಎಷ್ಟು ಕರ್ಚಾದ್ರು ಪರ್ವಾಗಿಲ್ಲ'.

'ಎಲ್ಲೆಲ್ಲೋ ಹೋಗ್ಬುಟ್ಟಲ್ಲೆ ಸೌಜನ್ಯಾ'.

'ನಾನ್ ಎಲ್ಲೋದ್ರು ಕಾಟಯ್ಯ ಅಲ್ಲಿಂದ ಟೈಮ್ ಟೈಮ್ಗೆ ಬುಲ್ಟಿನ್ ಕೊಡ್ತಾಯಿರ್ತಾನೆ ತಿಳ್ಕೊಳಿ. ಆವಯ್ಯ ನಮ್ಮಪ್ಪನ್ ಕೈಕೆಳ್ಗಿದ್ದೋನು'.

'ಅಂದರೆ ಇಲ್ಲಿನ ವಿಷಯ ಎಲ್ಲಾ ಅಲ್ಲಿ ರಿಪೋರ್ಟ್ ಮಾಡ್ತಾರ ಕಾಟಯ್ಯ?'

'ಅಂಗಂತ ಕೇಳಕೋಗ್ಬೇಡಿ... ಆಮೇಲೆ ಯೇಳದ್ ನಿಲ್ಲುಸ್ಬುಡ್ತಾರೆ... ಅಲ್ಲಾ ಅಲ್ಲಿ ಉಟ್ಟಬ್ಬ, ವಿಳೇಶಾಸ್ತ್ರ, ಬಳೆಶಾಸ್ತ್ರ, ಗೆಜ್ಜೆಶಾಸ್ತ್ರ ಮಾಡ್ಕೊಂಡಿರಕೆ, ನೀವೇನು ಪೊಲೀಸೊ ಇಲ್ಲ ಪೂಜಾರಿನೊ?'

'ಒಂದು ಕೇಕ್ ತರ್ಸಿ ಕಟ್ ಮಾಡ್ಸುದ್ದಪ್ಪ'.

'ಒಬ್ಳೂ ನನ್ ರಟ್ಟೆ ಗಾತ್ರಾನೂ ಇಲ್ಲ. ಒಳ್ಳೆ ಊದ್ಕಡ್ಡಿ ಇದ್ದಂಗವ್ಳೆ. ಇನ್ನೊಬ್ಳೂ ದಡುಗ್ಲಿ. ಏನ್ ಟೈಟ್ ಪ್ಯಾಂಟು. ಒಂದೆಜ್ಜೆ ಜೋರಾಗಿಕ್ಕುದ್ರೆ ಒಲಿಗೆಯೆಲ್ಲಾ ಪಟ್ ಪಟಾ ಅಂತ ಬಿಟ್ಕೊಂತದೇನೊ. ಅವೆರ್ಡುಕ್ಕೂ ಹೆಗ್ಗು ಸಿಗ್ಗು ಏನೂ ಬೇಡ್ವಾ, ಅಂಗೇ ನುಲಿತವಲ್ಲಾ'.

'ಅದ್ಸರಿ ಕಾಟಯ್.ಯ ಇದನ್ನೆಲ್ಲಾ ಅವರ ಮೊಬೈಲಲ್ಲಿ ಸ್ಟೇಟಸ್ ಮಾಡ್ಕೊಂಡವ್ರಾ?'

'ಮತ್ತೆ ಹೇಗೆ ಈ ಕಾಟಯ್ಯನ ನಂಬೋದು?'

'ಅಯ್ಯೋ ಯಾರ್ನು ನಂಬಂಗಿಲ್ಲ ಬಿಡಿ'.

'ಕೇಳಿ ಯೇಳ್ತೀನಿ...'

'ಹೇಳಿ ಕೇಳ್ತೀನಿ'.

'ಆವಾಗ ನಮ್ಮಪ್ಪ ಹೆಡ್ ಕಾನ್ಸ್‌ಟೆಬಲ್ಲು. ಈ ಕಾಟಯ್ಯ ಪೀಸಿ. ಇಬ್ರೂನೂವೆ ಕಮಿಷನರ್ ಆಫೀಸಲ್ಲೇ ಕೆಲ್ಸಾ ಮಾಡ್ತಿದ್ರು, ಆವಾಗ ಎಂತಾ ಗಸ್ತು ಕೊಟ್ಟಿದ್ದಾ ಅಂತೀರ ನಮ್ಮಪ್ಪಂಗೆ'.

'ಅಂಥದ್ದೇನು ಮಾಡಿದ್ದ?'

'ಕಮಿಷನರ್ ಆಫೀಸ್ ಕಾಂಪೌಂಡ್ ಒಳಗಡೆ ಹಿಂದುಕ್ಕೆ ಎರಡು ಅಲಸಿನ ಮರ ಇದ್ದೊ. ಅವನ್ನಾವನ್ನೋ ವರ್ಷ ವರ್ಷಾನೂ ಗುತ್ತಿಗೆ ಕೊಟ್ಬಿಡೋರು ನಮ್ಮಪ್ಪ'.

'ಅಂತು ನಿಮ್ಮಪ್ಪ ಕರ್ಮಯೋಗಿ ಬಿಡು, ಕಮಿಷನರ್ ಆಫೀಸೂ ಬಿಡ್ಲಿಲ್ಲ. ಸರಿ ಆಮೇಲೆ ಏನಾಯ್ತು?'

'ಅದ್ರ ವೋದನೇ ವರ್ಷ ಆ ಲೀಸ್ ದುಡ್ಡಾಗೆ ನಮ್ಮಮ್ಮಂಗೆ ವಂಕಿ ಉಂಗ್ರ ಮಾಡ್ಸಿದ್ರು. ತಗೋ, ಈ ಕಾಟಯ್ಯಂಗೆ ಕಣ್ ಕೆಂಪಾಗೋಯ್ತು. ಪಾಲುಗ್ ನಿಂತ್ಬುಟ್ಟ ಪಾಪಿ. ಒಂದ್ ಮರ ನಿಮ್ಗೆ, ಒಂದ್ ಮರ ನನ್ಗೆ ಅಂತಾ'.

'ಅಯ್ಯೋ ರಾಮ... ಸ್ವಲ್ಪಾನು ನಿಯತ್ ಬೇಡ್ವಾ, ಸೀನಿಯರ್ ಅಂತ'.

'ಕೇಳಿ ಹೇಳ್ತೀನಿ, ಆಮೇಲೆ ಏನಾಯ್ತು ಅಂತ...'

'ಹೇಳು'.

'ಆ ವರ್ಷ ಬಿಟ್ಟಿದ್ದ ಅಲಸಿನ ಕಾಯಿ ಎಲ್ಲಾ ಕಿತ್ಕೊಂಡು ಆಟೋನಗೆ ತುಂಬ್ಕೊಂಡು ಒಂಟಿದ್ನಲ್ಲ ಆ ಗುತ್ತಿಗೆದಾರ, ಅವನನ್ನ ನಿಲಾಕಿ, ಇದೇ ಕಾಟಯ್ಯ, ಕರೆಟ್ಟಾಗಿ ಕಮಿಷನರ್ ಕಾರ್ ಬರೋ ಟೈಮ್‌ಗೆ ಕಮಿಷನರ್ ಆಫೀಸ್ ಎಂಟ್ರೆನ್ಸಾಗೆ ಆಟೊ ನಿಲ್ಲುಸ್ಬುಟ್ಟ'.

'ಆಮೇಲೆ ಏನಾಯ್ತು?'

'ಸರಿ, ಕಮಿಷನರ್ ಸಾರ್ ಕಾರ್ ಬಂತು, ಈ ಆಟೊ ಅಡ್ಡ ನಿಂತೈತೆ. ಅವ್ರು ಎಲ್ಲಾ ವಿಚಾರಿಸಿ, ನಮ್ಮಪ್ಪನ್ನಾ ಏಕ್ದಮ್ ಸಸ್ಪೆಂಡೇ ಮಾಡ್ಬುಟ್ರು. ಕೈಕೆಳಗಿರೋರ್ದು ಏನೋ ಸಣ್ಣಪುಟ್ಟ ಕೆಲ್ಸ, ಕಂಡೂ ಕಾಣದಂಗ್ ಹೋಗ್ಬೇಕ್ ತಾನೇ. ಆಮೇಲೆ ನಮ್ಮಪ್ಪ ಅಬ್ರೀವ್ರ ಕೈಕಾಲಿಡ್ದು ಸರಿ ಮಾಡುಸ್ಕೊಂಡ್ರು ಅನ್ನೀ'.

'ಆಮೇಲೆ ನಿಮ್ಮಪ್ಪ ಈ ಕಾಟಯ್ಯನ್ನಾ ಸುಮ್ನೆ ಬಿಟ್ರಾ?'